(82)

**ಕರ್ನಾಟಕ ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಎಸ್.ವ್ಹಿ. ಸಂಕನೂರ, ಶ್ರೀ ಮರಿತಿಬ್ಬೇಗೌಡ, ಶ್ರೀ ಎಸ್.ಎಲ್. ಭೋಜೇಗೌಡ ಇವರು ನಿಯಮ 330 ರಡಿಯಲ್ಲಿ ಪ್ರಸ್ತಾಪಿಸಿರುವ ಸೂಚನೆ.**

**ವಿಷಯ**

ರಾಜ್ಯದ ವಿವಿಧ ಇಲಾಖೆಗಳಲ್ಲಿ 01.04.2006 ರ ಮೊದಲು ನೇಮಕಾತಿ ಪ್ರಕ್ರಿಯೆ ಪೂರ್ಣಗೊಂಡು, 01-04-2006 ನಂತರ ಕರ್ತವ್ಯಕ್ಕೆ ಹಾಜರಾದ 11366 ನೌಕರರಿಗೆ ಹಳೆ ಪಿಂಚಣಿ ಯೋಜನೆ [ಆದೇಶ ಸಂಖ್ಯೆ:ಆಇ:ಪಿಇಎನ್/99/2023, ದಿನಾಂಕ:24-01-2024] ವ್ಯಾಪ್ತಿಗೆ ಅಳವಡಿಸಿದಂತೆ, ಖಾಸಗಿ ಅನುದಾನಿತ ಪದವಿ ಕಾಲೇಜುಗಳಲ್ಲಿ ಅದೇ ರೀತಿಯಲ್ಲಿ ಸುಪ್ರೀಂ ಕೋರ್ಟ್ ತೀರ್ಪಿನಂತೆ ನೇಮಕಗೊಂಡ ಕರ್ತವ್ಯಕ್ಕೆ ಹಾಜರಾಗಿರುವ 148 ಉಪನ್ಯಾಸಕರಿಗೆ ಒ.ಪಿ.ಎಸ್. ಯೋಜನೆಯನ್ನು ಜಾರಿ ಮಾಡುವ ಬಗ್ಗೆ.

**ಉತ್ತರ**

ಸರ್ಕಾರದ ಪತ್ರ ಸಂಖ್ಯೆ: ಇಡಿ 97 ಯುಪಿಸಿ 2021(ಇ), ದಿ:13-01-2022ರಲ್ಲಿ ಆರ್ಥಿಕ ಇಲಾಖೆಯ ಅಭಿಪ್ರಾಯ ಪಡೆದು, ಅರೆ-ಕಾಲಿಕ ಉಪನ್ಯಾಸಕರು ವಿಲೀನಾತಿ ನಿಯಮಾವಳಿಗಳ ನಿಯಮ 3 ರ ಪ್ರಕಾರ ಖಾಲಿ ಹುದ್ದೆಗಳ ಲಭ್ಯತೆ ನಿಯಮಾನುಸಾರ ಅಗತ್ಯವಿರುವ ಕಾರ್ಯಭಾರದ ಲಭ್ಯತೆ ಹಾಗೂ ಮೀಸಲಾತಿ ಸೇರಿದಂತೆ ಇನ್ನಿತರೆ ಅಗತ್ಯ ಷರತ್ತುಗಳು ತೃಪ್ತಿಕರವಾಗಿ ಪೂರೈಸಿದ ನಂತರವಷ್ಟೆ ಪ್ರತ್ಯೇಕವಾಗಿ ಪರಿಗಣಿಸಿ ಅರೆ-ಕಾಲಿಕ ಉಪನ್ಯಾಸಕರನ್ನು ಸೇವೆಯಲ್ಲಿ ವಿಲೀನಗೊಳಿಸಲು ಅವಕಾಶವಿರುತ್ತದೆ. ಇದು ನೇರ ನೇಮಕಾತಿ ಪ್ರಕ್ರಿಯೆಯಾಗಿರುವುದಿಲ್ಲವಾದ್ದರಿಂದ, ಅರೆ-ಕಾಲಿಕ ಅಥವಾ ತಾತ್ಕಾಲಿಕವಾಗಿ ಸೇವೆ ಸಲ್ಲಿಸಿ, ನಂತರ ಸೇವಾ ಸಕ್ರಮಾತಿಯಾಗಿದ್ದು, ದಿ:01-04-2006ರ ನಂತರ ಕರ್ತವ್ಯಕ್ಕೆ ವರದಿ ಮಾಡಿಕೊಂಡಿದ್ದಲ್ಲಿ ಅಂತಹ ನೌಕರರುಗಳ ಸೇವೆಯನ್ನು ಡಿಫೈನ್ಡ್ ಪಿಂಚಣಿ ಯೋಜನೆಯಡಿ ಪರಿಗಣಿಸಲು ಅವಕಾಶವಿರುವುದಿಲ್ಲವೆಂದು ತಿಳಿಸಿ ಪತ್ರ ಹೊರಡಿಸಲಾಗಿರುತ್ತದೆ.

ಆದ್ದರಿಂದ, ಪ್ರಸ್ತುತ ದಿನಾಂಕ 01.04.2006ಕ್ಕಿಂತ ಮೊದಲು ಹೊರಡಿಸಿರುವ ವಿವಿಧ ಅಧಿಸೂಚನೆಗಳಂತೆ, 1.4.2006ರ ನಂತರ ಸೇವೆಗೆ ಸೇರಿರುವ 11366 ಸರ್ಕಾರಿ ನೌಕರರಿಗೆ ಒಪಿಎಸ್ ಆಯ್ಕೆಯನ್ನು ಸರ್ಕಾರ ನೀಡಿರುವಂತೆ ದಿನಾಂಕ 12.02.2004ರಂದು ಕರ್ನಾಟಕ ರಾಜ್ಯ ಪತ್ರದಲ್ಲಿ ಹೊರಡಿಸಿದ ಅಧಿಸೂಚನೆ ಸಂಖ್ಯೆ:ಇಡಿ:56:ಯುಪಿಸಿ:97ರ ಅನುಸಾರ 01.04.2006ರ ನಂತರ ಕರ್ತವ್ಯಕ್ಕೆ ಸೇರಿದ ಖಾಸಗಿ ಅನುದಾನಿತ ಪದವಿ ಕಾಲೇಜುಗಳ 148 ಉಪನ್ಯಾಸಕರುಗಳಿಗೆ ಒ.ಪಿ.ಎಸ್ ಯೋಜನೆ ವಿಸ್ತರಿಸಲು ನಿಯಮಗಳಲ್ಲಿ ಅವಕಾಶವಿರುವುದಿಲ್ಲ.

ಇಡಿ 52 ಯುಪಿಸಿ 2024 (ಇ)

**(ಡಾ: ಎಂ.ಸಿ. ಸುಧಾಕರ್)**
ಉನ್ನತ ಶಿಕ್ಷಣ ಸಚಿವರು